# ನಗರದ ಬಿಐಇಟಿಯಲ್ಲಿ

Janatavani 07-05-2022

# ಇಂದು 39ನೇ ಪದವಿ ಪ್ರದಾನ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 39 ನೇ ಪದವಿ ಪ್ರದಾನ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಧಾರವಾಡ ಐಐಟಿಯ ನಿರ್ದೇಶಕರಾದ ಪ್ರೊ. ಪಿ. ಸೇಶು ಹಾಗೂ ಕುಲಸಚಿವರಾದ ಡಾ. ಎಸ್. ಬಸವರಾಜಪ್ಪ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಪೂಜಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ ವಹಿಸಿಕೊಳ್ಳಲಿದ್ದಾರೆ.

ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ಮತ್ತು ನಿರ್ದೇಶಕರಾದ ಪ್ರೊ. ವೈ. ವೃಷಭೇಂದ್ರಪ್ಪ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಸುಮಾರು 650 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪದವಿ ಪ್ರಮಾಣ ಪತ್ರವನ್ನು ಸ್ವೀಕರಿಸಲಿದ್ದು, ವಿಶ್ವವಿದ್ಯಾಲಯ ರ್‍ಯಾಂಕ್ ವಿಜೇತರು ಹಾಗೂ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಮತ್ತು ಚಿನ್ನದ ಪದಕ ವಿಜೇತರಿಗೆ ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ್ ತಿಳಿಸಿದ್ದಾರೆ.

# ಕೋಟ್ಯಾಧೀಶರಾಗಿ ಸಮಾಜ ಸೇವೆ, ಇಲ್ಲವೇ ಮೂಕಪ್ರೇಕ್ಷಕ

## ಅಂತರ್‌ಶಿಸ್ತೀಯ ಅಧ್ಯಯನಕ್ಕಾಗಿ ಇಂಜಿನಿಯರಿಂಗ್ ಪದವೀಧರರಿಗೆ ಧಾರವಾಡ ಐ.ಐ.ಟಿ. ನಿರ್ದೇಶಕ ಸೇಶು ಕರೆ



ದಾವಣಗೆರೆ, ಮೇ 7 – ಯಾಂತ್ರೀಕೃತ ಕೃಷಿ, ಮಾನವ – ರೋಬೋಗಳು ಜೊತೆಯಾಗಿ ಕಾರ್ಯ ನಿರ್ವಹಿಸುವ ಕೈಗಾರಿಕೆಗಳು, ರೋಬೋಟ್ ಶಸ್ತ್ರಚಿಕಿತ್ಸೆಗಳಿಂದ ಹಿಡಿದು ಮಂಗಳ ಗ್ರಹದ ಮೇಲೆ ವಸಾಹತು ಸ್ಥಾಪಿಸುವವರೆಗೆ ಮುಂದಿನ ಪೀಳಿಗೆಯ ತಂತ್ರಜ್ಞಾನ ಅಭಿವೃದ್ಧಿಗೆ ಅಪಾರ ಅವಕಾಶಗಳಿವೆ. ಇವುಗಳನ್ನು ಬಳಸಿಕೊಳ್ಳಲು ಅಂತರ್‌ಶಿಸ್ತೀಯ ಅಧ್ಯಯನ ಅನಿವಾರ್ಯ ಎಂದು ಧಾರವಾಡ ಐ.ಐ.ಟಿ. ನಿರ್ದೇಶಕ ಪ್ರೊ. ಪಿ. ಸೇಶು ಹೇಳಿದ್ದಾರೆ.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದು ಆಯೋಜಿಸಲಾಗಿದ್ದ 39ನೇ ಪದವಿ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ತಂತ್ರಜ್ಞಾನದ ಅಗಾಧ ಬೆಳವಣಿಗೆಯನ್ನು ಬಳಸಿಕೊಂಡರೆ ಇಂಜಿನಿಯರಿಂಗ್ ಪದವೀಧರರು ಕೋಟ್ಯಾಧಿಪತಿಗಳಾಗಬಹುದು ಹಾಗೂ ಸಮಾಜಕ್ಕೆ ಸೇವೆಯನ್ನೂ ಸಲ್ಲಿಸಬಹುದು. ಇಲ್ಲವಾದರೆ, ಟೆಕ್ ವಲಯದ ಪ್ರಗತಿಯನ್ನು ಮೂಕ ಪ್ರೇಕ್ಷಕರಂತೆ ನೋಡುತ್ತಾ ಕುಳಿತುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ನೂತನ ಶಿಕ್ಷಣ ಪದ್ಧತಿಯು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒತ್ತು ನೀಡಿದೆ. ಅದರಂತೆ ಧಾರವಾಡದ ಐ.ಐ.ಟಿ. ಸಹ ವಿದ್ಯಾರ್ಥಿಗಳು ಬಯಸುವ ರೀತಿಯಲ್ಲಿ ಹಲವು ಕೋರ್ಸ್‌ಗಳನ್ನು ಮಿಶ್ರ ಮಾಡಿ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ವಿಸ್ತೃತ ಹಾಗೂ ಆಳವಾದ ಅಧ್ಯಯನ ನಡೆಸಲು ಅನುಕೂಲವಾಗುತ್ತಿದೆ ಎಂದರು.

ಇಂಜಿನಿಯರಿಂಗ್ ಪದವೀಧರರು ಯಾಂತ್ರೀಕೃತ ನಿಖರ ಕೃಷಿಗೆ ಅಪಾರ ಕೊಡುಗೆ ನೀಡಬಹುದು. ಭಾರತದಲ್ಲಿ ಕೃಷಿ ಶೇ.49ರಷ್ಟು ಜನರಿಗೆ ಉದ್ಯೋಗ ನೀಡುತ್ತಿದೆ.

ವಿದ್ಯುತ್‌ನ ಶೇ.22 ಹಾಗೂ ಅಂತರ್ಜಲದ ಶೇ.80ರಷ್ಟು ಕೃಷಿಗೆ ಬಳಕೆಯಾಗುತ್ತಿದೆ. ಇಷ್ಟಾದರೂ, ಚೀನಾ ಹಾಗೂ ಅಮೆರಿಕಗಳಿಗೆ ಹೋಲಿಸಿದರೆ ಭಾರತದಲ್ಲಿ ಧಾನ್ಯಗಳ ತಲಾ ಇಳುವರಿ ಸಾಕಷ್ಟು ಕಡಿಮೆ ಇದೆ. ಇಳುವರಿ ಹೆಚ್ಚಿಸಲು ನಿಖರ ಕೃಷಿಯ ಅಗತ್ಯವಿದ್ದು, ಅದನ್ನು ಇಂಜಿನಿಯರಿಂಗ್ ಪದವೀಧರರು ಒದಗಿಸಬೇಕಿದೆ ಎಂದರು.

ಕೃಷಿ ಸಲಕರಣೆಗಳನ್ನು ಒದಗಿಸುವಲ್ಲಿ ಹಲವಾರು ವಿಭಾಗಗಳ ಇಂಜಿನಿಯರ್‌ಗಳು ಕೈ ಜೋಡಿಸಬೇಕಾಗುತ್ತದೆ. ಮೆಕ್ಯಾನಿಕಲ್ ಇಂಜಿನಿಯರ್‌ಗಳು ನಳಿಕೆ ರೂಪಿಸಿದರೆ, ಎಲೆಕ್ಟ್ರಿಕಲ್ ಇಂಜಿನಿಯರ್‌ಗಳು ನಿಯಂತ್ರಕ ಹಾಗೂ ಐ.ಟಿ. ಇಂಜಿನಿಯರ್‌ಗಳು ಅಂತರ್ಜಾಲ ಆಧರಿತ ಉಪಕರಣ ರೂಪಿಸಬೇಕಾಗುತ್ತದೆ ಎಂದು ಪ್ರೊ. ಸೇಶು ವಿವರಿಸಿದರು.

ಇದೇ ರೀತಿ ಆರೋಗ್ಯ, ಪ್ರಯಾಣ, ಬಾಹ್ಯಾಕಾಶ, ಡ್ರೋನ್, ಸ್ಟಾರ್ಟ್ ಉದ್ಯಮಗಳಂತಹ ಹತ್ತಾರು ವಲಯಗಳಲ್ಲಿ ಹಲವಾರು ವಿಭಾಗಗಳ ಇಂಜಿನಿಯರ್‌ಗಳು ಜೊತೆಯಾಗಿ ಕೆಲಸ ಮಾಡಬೇಕಾಗುತ್ತದೆ ಎಂದವರು ಹೇಳಿದರು.

ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಉಪನ್ಯಾಸಕರಾದ ಪ್ರೊ. ಉಮಾ ಪಿ. ಸೇಶು ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ವಿಜ್ಞಾನ ಕಲಿಯಲು ಕಲೆಯೂ ಕಡ್ಡಾಯ

ಇಂಜಿನಿಯರ್‌ಗಳು ಅಂತರ್‌ಶಿಸ್ತೀಯ ಕಲಿಕೆಯಲ್ಲಿ ತೊಡಗುವ ಜೊತೆಗೆ, ಲಲಿತ ಕಲೆಗಳ ಹವ್ಯಾಸ ಹೊಂದುವುದೂ ಬೆಳವಣಿಗೆಗೆ ಪೂರಕ ಎಂದು ಧಾರವಾಡದ ಐ.ಐ.ಟಿ. ನಿರ್ದೇಶಕ ಪ್ರೊ. ಪಿ. ಸೇಶು ತಿಳಿಸಿದ್ದಾರೆ. ಹೀಗಾಗಿಯೇ ತಮ್ಮ ಸಂಸ್ಥೆಯಲ್ಲಿ ಇಂಜಿನಿಯರಿಗ್ ವಿದ್ಯಾರ್ಥಿಗಳು ಛಾಯಾಗ್ರಹಣ ಸೇರಿದಂತೆ ಹಲವಾರು ಕಲೆಗಳಲ್ಲಿ ಯಾವುದಾದರೂ ಒಂದನ್ನು ಕಲಿಯುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಗೆಲಿಲಿಯೋ ಚಿತ್ರ ಕಲಾವಿದರಾಗಿದ್ದರು. ಈ ಕಲೆ ಅವರು ಚಂದ್ರನ ಮೇಲೂ ಬೆಟ್ಟ – ಗುಡ್ಡಗಳಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನೆರವಾಯಿತು. ಕಲೆಯು ಯೋಚನಾ ಶಕ್ತಿ ಹೆಚ್ಚಿಸುತ್ತದೆ. ಹೊಸತನ ರೂಢಿಸಿಕೊಳ್ಳುವುದನ್ನು ಕಲಿಸುತ್ತದೆ ಎಂದವರು ತಿಳಿಸಿದರು.

**ಮಂಗಳನ ಮನೆಗೊಂದು ಇಟ್ಟಿಗೆಯ ಸೃಷ್ಟಿ :** ಇಸ್ರೋ ಹಾಗೂ ಐ.ಐ.ಎಸ್. ಸಂಸ್ಥೆಗಳು ಜೊತೆಯಾಗಿ ಮಂಗಳ ಗ್ರಹದ ಮೇಲೆ ಮನೆ ಕಟ್ಟಲು ಬೇಕಾಗುವಂತಹ ಇಟ್ಟಿಗೆ ರೂಪಿಸಿವೆ. ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಆಗುತ್ತಿರುವ ಬೆಳವಣಿಗೆ ನೋಡಿದರೆ ಇನ್ನೊಂದು ಪೀಳಿಗೆ ಕಳೆಯುವಷ್ಟರಲ್ಲಿ ಮಂಗಳ ಗ್ರಹದಲ್ಲಿ ವಸಾಹತು ಸ್ಥಾಪಿಸುವ ದಿನಗಳು ದೂರವಿಲ್ಲ ಎಂದು ಧಾರವಾಡದ ಐ.ಐ.ಟಿ. ನಿರ್ದೇಶಕ ಪ್ರೊ. ಪಿ. ಸೇಶು ಅಭಿಪ್ರಾಯಪಟ್ಟಿದ್ದಾರೆ.

# ಇಂದು ಬಿಐಇಟಿ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

Kannada Prabha 07-05-2022

ದಾವಣಗೆರೆ: ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 2020-21ನೇ ಸಾಲಿನಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಮೇ 7ರಂದು ಕಾಲೇಜಿನ ಎಸ್ಎಸ್ಎಂ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ. ಅಂದು ಬೆಳಿಗ್ಗೆ 10.30ಕ್ಕೆ ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಧಾರವಾಡ ಐಟಿಐ ನಿರ್ದೇಶಕ ಪ್ರೊ.ಪಿ.ಸೇಶು, ಕುಲಸಚಿವ ಡಾ.ಎಸ್. ಬಸವರಾಜಪ್ಪ, ಬಾಪೂಜಿ ವಿದ್ಯಾಸಂಸ್ಥೆ ಜಂಟಿ ಕಾರ್ಯದರ್ಶಿ ಎಸ್.ಎಸ್.ಮಲ್ಲಿಕಾರ್ಜುನ, ಕಾಲೇಜಿನ ಪ್ರಾಚಾರ್ಯಡಾ.ಎಚ್.ಬಿ.ಅರವಿಂದ,ನಿರ್ದೇಶಕಪ್ರೊ. ವೈ.ವೃಷಭೇಂದ್ರಪ್ಪ , ಡಾ.ಜಿ.ಪಿ.ದೇಸಾಯಿ ಭಾಗವಹಿಸಲಿದ್ದು, ಸುಮಾರು 650 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪದವಿ ಪ್ರಮಾಣ ಪತ್ರ ಸ್ವೀಕರಿಸುವರು.

# ಇಂದು

Nagaravani 07-05-2022

# ಬಿಐಇಟಿಯಲ್ಲಿ ಸಮಾರಂಭ

ದಾವಣಗೆರೆ: ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 39 ನೇ ಪದವಿ ಪ್ರದಾನ ಸಮಾರಂಭವನ್ನು ಮೇ.7ರ ಇಂದು ಬೆಳಿಗ್ಗೆ 10.30 ಗಂಟೆಗೆ ಕಾಲೇಜಿನ ಆವರಣ ದಲ್ಲಿರುವ ಎಸ್.ಎಸ್. ಮಲ್ಲಿ ಕಾರ್ಜುನ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಧಾರವಾಡ ಐಐಟಿಯ ನಿರ್ದೇಶಕ ಪ್ರೊ. ಪಿ. ಸೇಶು ಹಾಗೂ ಕುಲಸಚಿವ ಡಾ. ಎಸ್. ಬಸವರಾಜಪ್ಪ ಕಾರ್ಯಕ್ರಮ ದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊ ಳ್ಳಲಿದ್ದು, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಎಸ್.ಎಸ್ . ಮಲ್ಲಿಕಾರ್ಜುನ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿದ್ದಾರೆ.

(3ನೇ ಪುಟಕ್ಕೆ)

# ಇಂದು ಬಿಐಇಟಿಯಲ್ಲಿ ಸಮಾರಂಭ

(1ನೇ ಪುಟದಿಂದ)

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಪೂಜಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಶಾಮನೂರು ಶಿವಶಂಕರಪ್ಪ ವಹಿಸಿಕೊಳ್ಳಲಿದ್ದಾರೆ. ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ಮತ್ತು ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಸುಮಾರು 650 ವಿದ್ಯಾರ್ಥಿ–ವಿದ್ಯಾರ್ಥಿನಿಯರು ಪದವಿ ಪ್ರಮಾಣ ಪತ್ರವನ್ನು ಸ್ವೀಕರಿಸಲಿದ್ದು, ವಿಶ್ವವಿದ್ಯಾಲಯ ರ್‍ಯಾಂಕ್ ವಿಜೇತರು ಹಾಗೂ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಮತ್ತು ಚಿನ್ನದ ಪದಕ ವಿಜೇತರರಿಗೆ ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

# ಬಿಐಇಟಿ ಪದವಿ ಪ್ರದಾನ ಸಮಾರಂಭ ಇಂದು

ದಾವಣಗೆರೆ: ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 39ನೇ ಪದವಿ ಪ್ರದಾನ ಸಮಾರಂಭವು ಮೇ 7ರಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಧಾರವಾಡ ಐಐಟಿಯ ನಿರ್ದೇಶಕ ಪ್ರೊ.ಪಿ. ಸೇಶು, ಕುಲಸಚಿವರಾದ ಡಾ.ಎಸ್. ಬಸವರಾಜಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ ಪಾಲ್ಗೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಬಾಪೂಜಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ ವಹಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಬಿ. ಅರವಿಂದ, ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ 650 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರವನ್ನು ಸ್ವೀಕರಿಸಲಿದ್ದಾರೆ.

ಬಿಐಇಟಿ 39ನೇ ಪದವಿ ಪ್ರದಾನ ಸಮಾರಂಭದಲ್ಲಿ ಪ್ರೊ. ಪಿ. ಸೇತು

# ಅಂತರ್‌ಶಿಸ್ತೀಯ ಕಲಿಕೆಗಷ್ಟೇ ಭವಿಷ್ಯ



ಇಂದು ನಗರಕೆ ಜನತಾ ಜಲಧಾರೆ

₹ 18.50 ಕೋಟಿ ಅನುದಾನಕೆ ಪ್ರಸ್ತಾವ

Samyuktha Karnataka 08-05-2022

## ಬಿಐಇಟಿ ಕಾಲೇಜಿನಲ್ಲಿ 39ನೇ ಪದವಿ ಪ್ರದಾನ ಕಾರ್ಯಕ್ರಮ

# ಬಹುಶಿಸ್ತಿನ ಕಲಿಕೆಗೆ ಮಾತ್ರ ಭವಿಷ್ಯ



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಿದ್ದ 39ನೇ ಪದವಿ ಪ್ರದಾನ ಕಾರ್ಯಕ್ರಮವನ್ನು ಧಾರವಾಡ ಐಐಟಿ ನಿರ್ದೇಶಕ ಪ್ರೊ.ಪಿ.ಸೇಶು ಉದ್ಘಾಟಿಸಿದರು.

ದಾವಣಗೆರೆ: ಕಲಿಯುವುದು, ಕಲಿಯದೇ ಇರುವುದು, ಕಲಿತಿದ್ದನ್ನೇ ಮತ್ತೆ ಕಲಿಯುವುದು ಜೀವನದಲ್ಲಿ ಇದ್ದೇ ಇರುತ್ತದೆ. ಏನು ಕಲಿಯುತ್ತೇವೆ ಎಂಬುದರ ಮೇಲೆ ಬದುಕಿನ ಯಶಸ್ಸು ನಿಂತಿದೆ ಎಂದು ಧಾರವಾಡ ಐಐಟಿ ನಿರ್ದೇಶಕ ಪ್ರೊ.ಪಿ.ಸೇಶು ಅಭಿಪ್ರಾಯಪಟ್ಟರು.ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಂಜಿನಿಯರಿಂಗ್ ಪದವೀಧರರಿಗೆ ಶನಿವಾರ ಕಾಲೇಜಿನಲ್ಲಿ ಆಯೋಜಿಸಿದ್ದ 39ನೇ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತಿದೆ. ಮುಂದೆ ರೊಬೊಟಿಕ್ ಸರ್ಜರಿ ಬರಲಿದೆ. ವೈದ್ಯ ಕಂಪ್ಯೂಟರ್ ಮುಂದೆ ಕುಳಿತುಕೊಂಡು ನಿಯಂತ್ರಿಸುವುದು. ರೋಬೊಟ್ ಶಸ್ತ್ರ ಚಿಕಿತ್ಸೆ ನಡೆಸುವುದು ಆಗಲಿದೆ. ಮುಂದಿನ ಆರೋಗ್ಯ ಕ್ಷೇತ್ರ ಅಂದರೆ ಯಂತ್ರಗಳೇ ಕೆಲಸ ಮಾಡುವುದಾಗಿದೆ. ನಾವು ಧರಿಸುವ ಬಟ್ಟೆಯೂ ಬಯೋಸೆನ್ಸಾರ್ ಆಗಲಿದೆ ಎಂದು ತಿಳಿಸಿದರು.

ಒಂದೇ ವಿಷಯವನ್ನು ಕಲಿತು ಪರಿಣಿತರಾಗಿ ಅವಕಾಶ ಪಡೆದುಕೊಳ್ಳುವ ಕಾಲ ಇದಲ್ಲ. ಬಹುಶಿಸ್ತಿನ ಕಲಿಕೆಗೆ ಮಾತ್ರ ಭವಿಷ್ಯ ಇದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅಕಾಡೆಮಿಕ್ ಕಲಿಕೆ ಜತೆಗೆ ಸೈಂಟಿಫಿಕ್ ಮತ್ತು ಆರ್ಟಿಸ್ಟಿಕ್ ಆಗಿಯೂ ಕಲಿಯಬೇಕು. ಎರಡು ಅಥವಾ ಅದಕ್ಕಿಂತ ಅಧಿಕ ವಿಷಯಗಳನ್ನು ಏಕ ಕಾಲದಲ್ಲಿ ಕಲಿಯಲು ಸಾಧ್ಯವಾಗಬೇಕು ಎಂದು ಹೇಳಿದರು. ಕೃಷಿ ಬಗ್ಗೆ ತಿಳಿದುಕೊಳ್ಳುವುದಿದ್ದರೆ ಅದರ ಬಗ್ಗೆ ನಿಖರ ಮಾಹಿತಿ, ಅದಕ್ಕೆ ಬೇಕಾದ ತಂತ್ರಜ್ಞಾನ, ಮಣ್ಣಿನ ಗುಣ ಫಲವತ್ತತೆ ಎಲ್ಲವೂ ತಿಳಿಯಬೇಕು. ಭಾರತದಲ್ಲಿ ಜಿಡಿಪಿಯಲ್ಲಿ ಶೇ.16ರಷ್ಟು ಕೃಷಿಯಿಂದ ಬರುತ್ತದೆ. ಶೇ.49 ಮಂದಿಗೆ ಉದ್ಯೋಗ ನೀಡಿದೆ. ಶೇ.22ರಷ್ಟು ವಿದ್ಯುತ್ ಬಳಕೆಯಾಗುತ್ತದೆ. ಶೇ.80ರಷ್ಟು ಅಂತರ್ಜಲ ಕೃಷಿಗೆ ಬಳಕೆಯಾಗುತ್ತದೆ. ಆದರೂ ಉತ್ಪಾದನೆಯನ್ನು ಚೀನಾ, ಅಮೆರಿಕ ಇನ್ನಿತರೆ ದೇಶಗಳಿಗೆ ಹೋಲಿಸಿದಾಗ ನಮ್ಮಲ್ಲಿ ಬಹಳ ಕಡಿಮೆ ಇದೆ. ಈ ಬಗ್ಗೆ ಆಳವಾದ ಅಧ್ಯಯನ ಮಾಡಬೇಕು. ಕಡಿಮೆ ಜಾಗದಲ್ಲಿ ಸ್ಮಾರ್ಟ್ ಆಗಿ ಕೃಷಿ ಮಾಡುವ ವಿಧಾನ ಕಂಡುಕೊಳ್ಳಬೇಕೆಂದರು. ಈಗ ಎಲೆಕ್ಟ್ರಿಕ್ ವಾಹನಗಳು ಬರು ತ್ತಿವೆ. ಆದರೆ ಅದು ಚಾರ್ಜ್ ಮಾಡಲು ಹಿಡಿಯುವ ಸಮಯ ಗಂಟೆಗಟ್ಟಲೆ ಇದೆ. ಮುಂದೆ ಪೆಟ್ರೋಲ್ ಹಾಕುವಷ್ಟು ಸಮ ಯದಲ್ಲಿ ಚಾರ್ಜ್ ಕೂಡ ಆಗುವ ಅಗತ್ಯ ಇದೆ ಎಂದು ಮಾಹಿತಿ ನೀಡಿದರು. ಉಮಾ ಪಿ. ಸೇಶು, ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ, ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಎಲ್ಲ ವಿಭಾಗ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

22 ಕ್ಯಾರೆಟ್) ₹47,400 | ಶುದ್ಧ ಬೆಳ್ಳಿ ₹62,400 | ಪ್ರತಿ ಡಾಲರ್‌ಗೆ ₹77.03

Vijayavani 07-05-2022

# ಬಿಐಇಟಿಯಲ್ಲಿಂದು ಪದವಿ ಪ್ರದಾನ

**ದಾವಣಗೆರೆ:** ಬಿಐಇಟಿ ಕಾಲೇಜಿನ 39ನೇ ಪದವಿ ಪ್ರದಾನ ಸಮಾರಂಭ 7ರಂದು ಬೆಳಗ್ಗೆ 10.30ಕ್ಕೆ ಎಸ್.ಎಸ್.ಮಲ್ಲಿಕಾರ್ಜುನ ಸಭಾಂಗಣದಲ್ಲಿ ನಡೆಯಲಿದೆ. ಧಾರವಾಡ ಐಐಟಿ ನಿರ್ದೇಶಕ ಪ್ರೊ.ಪಿ.ಸೇಶು, ಕುಲಸಚಿವ ಡಾ. ಎಸ್. ಬಸವರಾಜಪ್ಪ, ಬಾಪೂಜಿ ವಿದ್ಯಾಸಂಸ್ಥೆ ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ, ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ, ಪ್ರೊ.ವೃಷಭೇಂದ್ರಪ್ಪ ಉಪಸ್ಥಿತರಿರುವರು.

ರೂಪಿಸಿದರು. ವೆಂಕಟೇಶನಾಯ್ಕ ವಂದಿಸಿದರು.

ಕ್ಯಾಸನಕೆರೆಯ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

Vijayavani 09-05-2022

# ತಂತ್ರಜ್ಞಾನದಿಂದ ಹಸನಾಗಲಿ ಬದುಕು

**ದಾವಣಗೆರೆ:** ದೇಶದ ವಿವಿಧ ಕ್ಷೇತ್ರಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ತಂತ್ರಜ್ಞಾನದ ಮೂಲಕ ಪರಿಹಾರ ಹುಡುಕಿ, ಜನರ ಜೀವನದ ಗುಣಮಟ್ಟ ಸುಧಾರಿಸಬೇಕು ಎಂದು ಧಾರವಾಡ ಐ.ಐ.ಟಿ ನಿರ್ದೇಶಕ ಪ್ರೊ. ಪಿ. ಸೇಶು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭವನ್ನು ಧಾರವಾಡ ಐಐಟಿ ನಿರ್ದೇಶಕ ಪ್ರೊ.ಪಿ.ಸೇಶು ಉದ್ಘಾಟಿಸಿದರು. ಕುಲಸಚಿವ ಡಾ.ಎಸ್. ಬಸವರಾಜಪ್ಪ, ಪ್ರಾಧ್ಯಾಪಕಿ ಉಮಾ ಸೇಷು, ಬಿ.ಐ.ಇ.ಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಇದ್ದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ, ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ಕೃಷಿ ಕ್ಷೇತ್ರ ದೇಶದ ಜಿ.ಡಿ.ಪಿಗೆ ಶೇ.16ರಷ್ಟು ಕೊಡುಗೆ ನೀಡುತ್ತಿದೆ. ಶೇ. 49 ರಷ್ಟು ಜನರಿಗೆ ಉದ್ಯೋಗ ಒದಗಿಸಿದೆ. ದೇಶದಲ್ಲಿ ಬಳಕೆಯಾಗುವ ವಿದ್ಯುತ್‌ನಲ್ಲಿ ಕಾಲು ಭಾಗ ಕೃಷಿಯ ಪಾಲಿದೆ. ವ್ಯವಸಾಯದಲ್ಲಿ ಶೇ. 80 ರಷ್ಟು ಅಂತರ್ಜಲದ ಬಳಕೆಯಾಗುತ್ತದೆ ಎಂದು ತಿಳಿಸಿದರು.

ಭಾರತದಲ್ಲಿ ಉತ್ಪಾದಕತೆ ಕಡಿಮೆಯಿದೆ. ಕೃಷಿ ಭೂಮಿಯಲ್ಲಿ ಮಣ್ಣಿನ ಫಲವತ್ತತೆ ಹೇಗೆ ಸುಧಾರಿಸಬಹುದು, ಪೌಷ್ಟಿಕಾಂಶ ಹೆಚ್ಚಿಸಬಹುದು, ಬೆಳೆಗೆ ತಗುಲಿರುವ ರೋಗವನ್ನು ನಿರ್ಮೂಲನೆ ಮಾಡಬಹುದು, ರಸಗೊಬ್ಬರ ಎಷ್ಟು ಪ್ರಮಾಣದಲ್ಲಿ ಬಳಸಬೇಕು, ಕೃಷಿ ವೆಚ್ಚವನ್ನು ಕಡಿಮೆ ಮಾಡಬಹುದೇ? ಎಂಬ ಅಂಶಗಳ ಕಡೆಗೆ ಗಮನಹರಿಸಿ ರೈತರಿಗೆ ನೆರವಾಗಬೇಕು ಎಂದು ಸಲಹೆ ನೀಡಿದರು. ಇತ್ತೀಚೆಗೆ ವಿದ್ಯುತ್ ಚಾಲಿತ ವಾಹನಗಳು ರಸ್ತೆಗಿಳಿಯುತ್ತಿದ್ದು, ದ್ವಿಚಕ್ರ ವಾಹನಗಳ ಬ್ಯಾಟರಿಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗಿವೆ. ಈ ಸಮಸ್ಯೆಗೆ ಪರಿಹಾರ ಹುಡುಕಬೇಕು. ಇಸ್ರೋ ಮತ್ತು ಐ.ಐ.ಎಸ್.ಸಿಯ ವಿಜ್ಞಾನಿಗಳು ಮಂಗಳ ಗ್ರಹದಲ್ಲಿ ಕಟ್ಟಡ ನಿರ್ಮಿಸಲು ಬೇಕಾಗುವ ಇಟ್ಟಿಗೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ರೀತಿಯ ಹೊಸ ಆಲೋಚನೆಗಳನ್ನು ಮಾಡಬೇಕು ಎಂದರು.

ಡ್ರೋನ್ ಯಂತ್ರವನ್ನು ರಕ್ಷಣೆ, ಸರ್ವೇಕ್ಷಣೆ, ಮನರಂಜನೆ ಮುಂತಾದ ಕ್ಷೇತ್ರಗಳಲ್ಲಿ ಬಳಸುವ ನಿಟ್ಟಿನಲ್ಲಿ ಸಂಶೋಧನೆ ಮಾಡಬೇಕು. ಭೂದಾಖಲೆಗಳ ಡಿಜಿಟಲೀಕರಣ ಕುರಿತು ಯೋಚಿಸಬೇಕು. ಇಂಜಿನಿಯರಿಂಗ್ ಪದವಿ ಪಡೆದರೂ ಕಲಿಕೆ ನಿರಂತರವಾಗಿರುತ್ತದೆ. ಶಿಕ್ಷಣ ನೀಡಿರುವ ದೇಶಕ್ಕೆ ಮರಳಿ ಕೊಡುಗೆ ನೀಡುವ ಜವಾಬ್ದಾರಿ ನಿಮ್ಮದಾಗಿದೆ ಎಂದರು. ಧಾರವಾಡ ಐ.ಐ.ಟಿ ಕುಲಸಚಿವ ಡಾ.ಎಸ್. ಬಸವರಾಜಪ್ಪ, ಪ್ರಾಧ್ಯಾಪಕಿ ಉಮಾ ಸೇಷು, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಅರವಿಂದ್ ಇದ್ದರು.